ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—25 ಮನೆಗಳಲ್ಲಿ 7 ಮನೆಗಳನ್ನು ಕಟ್ಟಿ ಮುಗಿಸಿದ್ದಾರೆ. Deputy Minister for Planning ಅವರು ಅಲ್ಲಿಗೆ ಹೋದಾಗ ಉಳಿದ 18 ಮನೆಗಳನ್ನು ಈ ವರ್ಷವೇ ಕಟ್ಟಿಸಿ ಕೊಡುವುದಾಗಿ ಮಾತುಕೊಟ್ಟು ಬಂದಿದ್ದಾರೆ, ಅದು ನಿಜವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾತು ಕೊಟ್ಟು ಬಂದಿದ್ದು ನನಗೆ ಗೊತ್ತಿಲ್ಲ.

Cadre and Recruitment Rules of Graduate Teachers.

*Q.—409. Smt. RATHNAMMA MADHAVA RAO (Shimoga).—

Will the Government be pleased to state :—

whether the Cadre and Recruitment Rules regarding promotions, pay scales, etc., of Graduate Teachers have been finalised ?

A.—Sri S. R. KANTHI (Minister for Education).—

(*a*) No.

ಶ್ರೀಮತಿ ರತ್ನಮ್ಮ ಮಾಧವರಾವ್.—ಪ್ರಶ್ನೆಗೆ ಉತ್ತರವಾಗಿ "No" ಎಂದು ಇದೆ, "why" ಎಂದು ಕೇಳುತ್ತೇನೆ.

†ಶ್ರೀ ಎಸ್. ಆರ್. ಕಂಠಿ.—ತಾವು ಕೇಳಿದ ಪ್ರಶ್ನೆಗೆ "ನೊ" ಎಂದು ಉತ್ತರ ಕೊಟ್ಟಿದೆ, ಏತಕ್ಕೆ ಎಂದರೆ ಕೇಡರ್ ಅಂಡ್ ರೆಕ್ರೂಟ್‌ಮೆಂಟ್ ರೂಲ್ಸ್ ಪಿ. ಎಸ್. ಸಿ. ಗೆ ಹೋಗಿದೆ. ಅಲ್ಲಿಂದ ಬರುವುದಿದೆ.

ಶ್ರೀಮತಿ ನಾಗರತ್ನಮ್ಮ ಹಿರೇಮಠ್.—ಈಗ 9 ವರ್ಷದಿಂದ ಪ್ರಶ್ನೆ ಬರುತ್ತಿದೆ, "ನೊ" ಎಂದು ಉತ್ತರ ಹೇಳುತ್ತಿದ್ದೀರಿ, ಇನ್ನೂ ಎಷ್ಟು ವರ್ಷಗಳಾಗಬಹುದು ? ಆಗುತ್ತದೋ ಇಲ್ಲವೋ ಕೊನೆಯದಾಗಿ ಹೇಳಿ ?

ಶ್ರೀ ಎಸ್. ಆರ್. ಕಂಠಿ.—ಆಗಲೇ ಹೇಳಿದೆ, ಪಿ. ಎಸ್. ಸಿ. ಗೆ ರೂಲ್ಸ್ ಮಾಡಿ ಕಳಿಸಿದೆ ಯೆಂದು. ಅವರು ಅದನ್ನು ನ್ಯೂ ಟಿನಿ ಮಾಡುತ್ತಿದ್ದಾರೆ, ಇಷ್ಟರಲ್ಲೇ ಬರುವ ನಿರೀಕ್ಷೆಯೂ ಇದೆ. ಅದು ಬಂದ ಮೇಲೆ ಕ್ಯಾಬಿನೆಟ್‌ನಲ್ಲಿ ಕನ್‌ಸಿಡರ್ ಮಾಡುತ್ತೇವೆ.

Uniform Policy with regard to Service Conditions of Teachers in different High Schools.

*Q.—298. Sri D. PARAMESHWARAPPA (Honnali).—

Will the Government be pleased to state :—

(*a*) the number of Municipal and Taluk Board High Schools in Old Mysore State ;

(*b*) the number of teachers working in these High Schools ;

(*c*) whether the service conditions applicable to the teachers working in Government High Schools apply for the teachers working in Municipal and Taluk Board High Schools ;

(*d*) whether Government intend converting the Municipal High Schools in the Old Mysore Area into single Unit High Schools ;